| ಕರ್ನಾಟಕ ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 739(890) |
| ಸದಸ್ಯರ ಹೆಸರು | ಶ್ರೀ ಎನ್. ಎಸ್. ಬೋಸರಾಜು (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 24.08.2026 |
| ಉತ್ತರಿಸುವವರು | ಮಾನ್ಯ ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

| ಪ್ರಶ್ನೆ | ಉತ್ತರ |
|---|---|
| ಅರಣ್ಯ ಹಾಗೂ ಕಂದಾಯ ಇಲಾಖೆಗಳ ಜಂಟಿ ಸಮಿತಿಯೊಂದಿಗೆ ರಾಯಚೂರು ನಗರದ ಸುತ್ತಮುತ್ತಲು ಇರುವ ಅರಣ್ಯ ಪ್ರದೇಶವನ್ನು ಗುರುತಿಸಿ ಸರ್ವೆ ಮಾಡಿ ವರದಿ ನೀಡಲು ಆದೇಶ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸದರಿ ವರದಿಯಲ್ಲಿ ಅರಣ್ಯ ಇಲಾಖೆಗೆ ಸಂಬಂದ ಪಟ್ಟು ಗುರುತಿಸಿರುವಂತಹ ವಿವರಗಳೇನು: | ರಾಯಚೂರು ಜಿಲ್ಲೆ, ರಾಯಚೂರು ತಾಲೂಕ, ರಾಯಚೂರು ಗ್ರಾಮ ಹಾಗೂ ಮಲಿಯಾಬಾದ ಗ್ರಾಮಗಳಲ್ಲಿನ ಒಟ್ಟು 202 ಸರ್ವೆ ನಂಬರಗಳನ್ನು ಒಳಗೊಂಡು Nizam Govt. Order dated 13 Azur 1355 Fasli (dt. 18-10-1945) U/s 7 of Hyderabad Forest Act 1326 ರ ಪ್ರಕಾರ 2209 ಎಕರೆ 3 ಗುಂಟೆ ಅಧಿಸೂಚನೆ ಹೊರಡಿಸಲಾಗಿರುತ್ತದೆ.<br><br>ನಂತರ Forest Settlement Officer ರವರು ಹೈದಾಬಾದ್ ಅರಣ್ಯ ಕಾಯಿದೆ 1326 ರ ಸೆಕ್ಷನ್ 10 ರ ಅಡಿಯಲ್ಲಿ ದಿನಾಂಕ 24-02-1946 ರಂದು ಈ ಮೇಲಿನ ಎಲ್ಲಾ ಸರ್ವೆ ನಂಬರಗಳನ್ನು ಒಳಗೊಂಡಂತೆ ಒಟ್ಟು ವಿಸ್ತೀರ್ಣ 2209 ಎಕರೆ 3 ಗುಂಟೆ ಪ್ರದೇಶಕ್ಕೆ ಉದ್ಘೋಷಣೆ (Proclamation) ಅಧಿಸೂಚನೆಯನ್ನು ಹೊರಡಿಸಿರುತ್ತಾರೆ.<br><br>ಮುಂದುವರೆದು ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 22/08/2025 ರಂದು ಅರಣ್ಯ, ಕಂದಾಯ ಅಧಿಕಾರಿಗಳ ಸಭೆಯಲ್ಲಿ ಮಾನ್ಯ ಸಚಿವರು ರಾಯಚೂರು–ಮಲಿಯಾಬಾದ್ ಗ್ರಾಮಗಳ ಒಟ್ಟು 202 ಸರ್ವೆ ನಂಬರಗಳ ಸರ್ವೇ ಕಾರ್ಯ ಕೈಗೊಂಡು ಹಾಲಿ ಸ್ಥಿತಿಯನ್ನು ವರದಿ ಮಾಡಲು ನಿರ್ದೇಶನ ನೀಡಿರುತ್ತಾರೆ.<br><br>ಅದರಂತೆ ಜಿಲ್ಲಾಧಿಕಾರಿಗಳು ರಾಯಚೂರು ಜಿಲ್ಲೆ ಇವರ ಕಚೇರಿ ಆದೇಶ ಪತ್ರ ಸಂಖ್ಯೆ:ಕಂ.LND.2025-26 ದಿನಾಂಕ:30-08-2025 ರಂತೆ ಕಮಿಟಿ ರಚಿಸಿ ಜಂಟಿ ಸರ್ವೇ ಮಾಡಿ ವರದಿ ನೀಡಲು ಆದೇಶಿಸಲಾಗಿತ್ತು.<br><br>ಜಿಲ್ಲಾಧಿಕಾರಿಗಳು ರಾಯಚೂರು ಇವರ ಆದೇಶದಂತೆ ರಾಯಚೂರು-ಮಲಿಯಾಬಾದ್ ಗ್ರಾಮಗಳ ಒಟ್ಟು 202 ಸರ್ವೇ ನಂಬರಗಳ ಜಂಟಿ ಸರ್ವೇ ಕಾರ್ಯಕ್ಕೆ ಅರಣ್ಯ ಇಲಾಖೆ , ಭೂಮಾಪನ ಇಲಾಖೆ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಸರ್ವೇ ಕಾರ್ಯ ಪೂರ್ಣಗೊಳಿಸಿ, ಒಟ್ಟು 202 ಸರ್ವೇ ನಂಬರಗಳ ಹಾಲಿ ಸ್ಥಿತಿಯ ವರದಿ ಪರಿಶೀಲನೆಯಲ್ಲಿದೆ. |

| | |
|---|---|
| | ಸದರಿ ರಾಯಚೂರು-ಮಲಿಯಾಬಾದ್ ಅರಣ್ಯ ಪ್ರದೇಶದ ಸರ್ವೇ ನಂಬರಗಳಾದ 1139 1140 ಮತ್ತು 1164 ಗಳಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಛ ನ್ಯಾಯಾಲಯ ಬೆಂಗಳೂರನಲ್ಲಿ ಮಾದಿಗ ಮೀಸಲಾತಿ ಹೋರಾಟ ಸಮಿತಿ ರಾಯಚೂರು ಇವರು WP No:6711/2021 (PIL) ಪ್ರಕರಣ ದಾಖಲಿಸಿದ್ದು ಸದರಿ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ. |
| ಈ ವರದಿ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಈ ಬಗ್ಗೆ ತೀರ್ಮಾನಿಸಬೇಕಿರುತ್ತದೆ. |

**ಕಡತ ಸಂಖ್ಯೆ:ಅಪಜೀ 142 ಎಫ್ಎಎಫ್ 2026**

(ರಾಮಲಿಂಗಾರೆಡ್ಡಿ)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು